# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2017-18ನೇ ಸಾಲಿನ ಆಯವ್ಯಯದ ಘೋಷಣೆಯಂತೆ ತೆಂಗುನಾರಿನ ಕುಶಲಕರ್ಮಿಗಳಿಗೆ ಅನುರೂಪ ವೇತನ ಪ್ರೋತ್ಸಾಹ ನೀಡುವ ಮಾರ್ಗಸೂಚಿಗಳ ಬಗ್ಗೆ.

ಓದಲಾಗಿದೆ:
1. ಆಯುಕ್ತರು, ಕೈಗಾರಿಕಾಭಿವೃದ್ಧಿ ಇವರ ಪತ್ರ ಸಂ. ಕೈವಾಇ/ವಿಶ್ವ/ಎ4/ಕೆಎಸ್‌ಸಿಡಿಸಿ-ಕೆಎಸ್‌ಸಿಸಿಎಫ್/ಹೊಯೋ/ಕ್ರಿಯೋ-17-18/3/2017-18, ದಿ: 20.04.2017.
2. ಸರ್ಕಾರಿ ಆದೇಶ ಸಂ. ಸಿಐ 49 ಸಿಎಸ್‌ಸಿ 2017, ಬೆಂಗಳೂರು, ದಿನಾಂಕ: 06.06.2017.
3. ಆಯುಕ್ತರು, ಕೈಗಾರಿಕಾಭಿವೃದ್ಧಿ ಇವರ ಪತ್ರ ಸಂ. ಕೈವಾಇ:ವಿಶ್ವ:ಎ2: ತೆಂ.ನಾ:51: 2016-17, ದಿ: 20.09.2017.
4. ಯೋಜನಾ ಇಲಾಖೆಯ ಟಿಪ್ಪಣಿ ಸಂ: ಪಿಡಿ 22 ಎಫ್‌ಆರ್‌ಓ 2017, ದಿ: 16.10.2017.
5. ಆರ್ಥಿಕ ಇಲಾಖೆಯ ಟಿಪ್ಪಣಿ ಸಂ: ಆಇ 355 ವೆಚ್ಚ-1/2017, ದಿ: 05.12.2017.

* * * * *

## ಪ್ರಸ್ತಾವನೆ:

2017-18ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ ಸಂ:399ರಲ್ಲಿ "ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮದಲ್ಲಿ ಕಾರ್ಯನಿರ್ವಹಿಸುತ್ತಿರುವ ತೆಂಗಿನ ನಾರಿನ ಕುಶಲಕರ್ಮಿಗಳಿಗೆ ಅನುರೂಪ ವೇತನ ಪ್ರೋತ್ಸಾಹಗಳನ್ನು ಸಂದಾಯ ಮಾಡಲಾಗುವುದು" ಎಂದು ಘೋಷಿಸಲಾಗಿದೆ.

ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರ ಮಹಾಮಂಡಳಿ ಇವುಗಳ ಅಡಿಯಲ್ಲಿ ಬರುವ ತೆಂಗಿನ ನಾರಿನ ಸಹಕಾರಿ ಸಂಘಗಳು ತೆಂಗಿನ ನಾರನ್ನು ಬಳಸಿ ಮೌಲ್ಯಧಾರಿತ ವಸ್ತುಗಳನ್ನು ಉತ್ಪಾದಿಸುವಲ್ಲಿ ಅನೇಕ ಗ್ರಾಮೀಣ ಭಾಗದ ನಿರುದ್ಯೋಗಿ ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಹಿಂದುಳಿದ ವರ್ಗದ ಮಹಿಳೆಯರಿಗೆ ಉದ್ಯೋಗಾವಕಾಶ ಕೊಡುವಲ್ಲಿ ಸಫಲರಾಗಿವೆ. ಆದರೆ, ಅದು ಲಾಭದಾಯಕವಾಗದೇ ಇರುವುದರಿಂದ ಹೆಚ್ಚಿನ ಪ್ರಮಾಣದಲ್ಲಿ ಉದ್ಯೋಗಾವಕಾಶ ಕಲ್ಪಿಸಲು ಸಾಧ್ಯವಾಗದೇ, ಕನಿಷ್ಠ ಉದ್ಯೋಗಾವಕಾಶ ನೀಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ, ಸರ್ಕಾರವು ತೆಂಗಿನ ನಾರಿನ ನಿಗಮ ಮತ್ತು ಮಹಾಮಂಡಳಿಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕುಶಲಕರ್ಮಿಗಳಿಗೆ ಅನುರೂಪ ವೇತನ ಪ್ರೋತ್ಸಾಹ ಮಜೂರಿಯನ್ನು ಪಾವತಿ ಮಾಡಲಾಗುವುದೆಂದು ತಿಳಿಸುತ್ತಾ, ಇದರಿಂದ ಹೆಚ್ಚಿನ ಕುಶಲಕರ್ಮಿಗಳಿಗೆ ಕೆಲಸದ ಅವಕಾಶ ಮಾಡಿದಂತಾಗುವುದಲ್ಲದೆ, ಅವರ ಸಾಮಾಜಿಕ ಮಟ್ಟ ಸುಧಾರಿಸುವಲ್ಲಿ ಸರ್ಕಾರದ ಯೋಜನೆ ಫಲಪ್ರದವಾಗುತ್ತದೆ.

ಅದರಂತೆ, ಉಲ್ಲೇಖ (3)ರಲ್ಲಿ ಓದಲಾದ ಪತ್ರದಲ್ಲಿ ಆಯುಕ್ತರು, ಕೈಗಾರಿಕಾಭಿವೃದ್ಧಿ ಇವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ, ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರ ಮಹಾಮಂಡಳಿ ಇವರು ಉತ್ಪಾದಿಸುವ 30 ಉತ್ಪನ್ನಗಳ ತುಂಡುಭತ್ಯೆ ದರವನ್ನು ಪಡೆದು ಅವುಗಳಲ್ಲಿ ಕನಿಷ್ಠವಾದುದನ್ನು ಸರ್ಕಾರದಿಂದ ಕುಶಲಕರ್ಮಿಗಳಿಗೆ ಪ್ರೋತ್ಸಾಹಧನವಾಗಿ ಪಾವತಿಸಬಹುದೆಂದು ಶಿಫಾರಸ್ಸು ಮಾಡಿರುತ್ತಾರೆ ಮತ್ತು ಅದನ್ನು ಫಲಾನುಭವಿಗಳಿಗೆ ಪಾವತಿಸುವ ಬಗ್ಗೆ ಕೆಲವು ಮಾರ್ಗಸೂಚಿಗಳನ್ನು ಸಿದ್ಧಪಡಿಸಿ ಸರ್ಕಾರದ ಅನುಮೋದನೆಗೆ ಸಲ್ಲಿಸಿರುತ್ತಾರೆ.

KARNATAKA STATE COIR ... JAN 2018

ಉಲ್ಲೇಖ(4)ರ ಟಿಪ್ಪಣಿಯಲ್ಲಿ ಯೋಜನಾ ಇಲಾಖೆಯು ಕರ್ನಾಟಕ ರಾಜ್ಯ ತೆಂಗಿನ ಅಭಿವೃದ್ಧಿ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕುಶಲಕರ್ಮಿಗಳಿಗೆ ಅನುರೂಪ ವೇತನ ಪ್ರೋತ್ಸಾಹಧನವನ್ನು ನೀಡಲು ಆಯವ್ಯಯದಲ್ಲಿ ಲಭ್ಯವಿರುವ ಅನುದಾನದಲ್ಲಿ ಅನುಷ್ಠಾನಗೊಳಿಸಲು ಸಹಮತಿಸಿರುತ್ತದೆ. ಅದರಂತೆ, ಉಲ್ಲೇಖ(5)ರ ಟಿಪ್ಪಣಿಯಲ್ಲಿ ಆರ್ಥಿಕ ಇಲಾಖೆಯು ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮದಲ್ಲಿ ಕಾರ್ಯನಿರ್ವಹಿಸುತ್ತಿರುವ ತೆಂಗು ನಾರು ಕುಶಲಕರ್ಮಿಗಳಿಗೆ ಅನುರೂಪ ವೇತನ ಪ್ರೋತ್ಸಾಹ ಧನವನ್ನು ಸಂದಾಯ ಮಾಡುವ ಆಯವ್ಯಯ ಘೋಷಣೆಯ ಪ್ರಯೋಜನೆಯನ್ನು ಆಯವ್ಯಯದಲ್ಲಿ ಒದಗಿಸಿರುವ ಅನುದಾನದ ಮಿತಿಯೊಳಗೆ ರಾಜ್ಯ ತೆಂಗಿನ ನಾರಿನ ಸಹಕಾರ ಮಹಾಮಂಡಳಿಗಳ ಕುಶಲಕರ್ಮಿಗಳಿಗೂ ವಿಸ್ತರಿಸಲು ಸಹಮತಿಸಿರುತ್ತದೆ. ಆದುದರಿಂದ, ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಈ ಮುಂದಿನಂತೆ ಆದೇಶಿಸಿದೆ.

**<u>ಸರ್ಕಾರಿ ಆದೇಶ ಸಂ. ಸಿಐ 49 ಸಿಎಸ್‌ಸಿ 2017, ಬೆಂಗಳೂರು, ದಿನಾಂಕ: 01.01.2018.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 2017-18ನೇ ಸಾಲಿನಲ್ಲಿ ತೆಂಗು ಭಾಗ್ಯ ಯೋಜನೆಯಡಿಯಲ್ಲಿ ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ರಾಜ್ಯ ತೆಂಗಿನ ನಾರಿನ ಮಹಾಮಂಡಳಿಯವರು ತೆಂಗುನಾರಿನ ಕುಶಲಕರ್ಮಿಗಳಿಗೆ ಅನುರೂಪ ವೇತನ ಪ್ರೋತ್ಸಾಹ ಧನವನ್ನು ಅನುಬಂಧ-1ರಲ್ಲಿ ನೀಡಿರುವ ಮಾರ್ಗಸೂಚಿಯನುಸಾರ ಪಾವತಿಸುವುದು ಮತ್ತು ಅನುಷ್ಠಾನಗೊಳಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ<br>ಮತ್ತು ಅವರ ಹೆಸರಿನಲ್ಲಿ,

[ಸುಮತಿ ಎಸ್.]

ಸರ್ಕಾರದ ಅಧೀನ ಕಾರ್ಯದರ್ಶಿ [ಸಪ್ರಕೈ],<br>ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಇವರಿಗೆ:

1) ಪ್ರಧಾನ ಮಹಾಲೇಖಪಾಲರು (ಜಿ & ಎಸ್‌ಎಸ್‌ಎ) ಕರ್ನಾಟಕ, ಹೊಸ ಕಟ್ಟಡ, 'ಆಡಿಟ್ ಭವನ', ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು – 560001.
2) ಪ್ರಧಾನ ಮಹಾಲೇಖಪಾಲರು (ಇ & ಆರ್‌ಎಸ್‌ಎ) ಕರ್ನಾಟಕ, ಹೊಸ ಕಟ್ಟಡ, 'ಆಡಿಟ್ ಭವನ', ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು – 560001.
3) ಪ್ರಧಾನ ಮಹಾಲೇಖಪಾಲರು (ಎ&ಇ) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು – 560001.
4) ಮಾನ್ಯ ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರು, ವಿಧಾನ ಸೌಧ, ಬೆಂಗಳೂರು.
5) ಮಾನ್ಯ ಸಣ್ಣ ಕೈಗಾರಿಕಾ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
6) ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-1.
7) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ, ಎಚ್‌ಟಿಸಿಸಿ ಬಿಲ್ಡಿಂಗ್, ಕಸ್ತೂರಿಬಾ ರಸ್ತೆ, ಬೆಂಗಳೂರು.
8) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರ ಮಹಾಮಂಡಳ, ಜಿಲ್ಲಾ ಕೈಗಾರಿಕಾ ಕೇಂದ್ರದ ಕಟ್ಟಡ, [illegible] ಅಡ್ಡರಸ್ತೆ, ರಾಜಾಜಿನಗರ ಕೈಗಾರಿಕಾ ವಸಾಹತು, ಬೆಂಗಳೂರು-[illegible].

9) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ–1), ವಿಧಾನಸೌಧ, ಬೆಂಗಳೂರು–1.

10) ಹಿರಿಯ ನಿರ್ದೇಶಕರು (ಪಿಎಫ್‌ಆರ್), ಯೋಜನಾ ಇಲಾಖೆ, ಕೊ.ಸಂ. 720, 7ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

11) ಆಂತರಿಕ ಆರ್ಥಿಕ ಸಲಹೆಗಾರರು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.

12) ಸರ್ಕಾರದ ಅಧೀನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, (ಸಮನ್ವಯ & ಸೇವೆಗಳು), ವಿಕಾಸಸೌಧ, ಬೆಂಗಳೂರು. (ಮಲ್ಟಿಗ್ರಾಫ್ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಿಗೆ ಕಳುಹಿಸುವ ಸಲುವಾಗಿ)

13) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

**ಸರ್ಕಾರದ ಆದೇಶ ಸಂ: ಸಿಐ 49 ಸಿಎಸ್‌ಸಿ 2017, ದಿ: 01.01.2018 ಕ್ಕೆ ಅನುಬಂಧ–1**

# 2017–18ನೇ ಸಾಲಿನ ಆಯವ್ಯಯ ಘೋಷಣೆಯಂತೆ ತೆಂಗು ನಾರು ಕುಶಲಕರ್ಮಿಗಳಿಗೆ ಅನುರೂಪ ವೇತನ ಪ್ರೋತ್ಸಾಹ ಸಂದಾಯ ಮಾಡುವ ಬಗ್ಗೆ ಮಾರ್ಗಸೂಚಿಗಳು

## ಮಾರ್ಗಸೂಚಿಗಳು, ಷರತ್ತುಗಳು ಮತ್ತು ನಿಬಂಧನೆಗಳು:

1. ಒದಗಿಸಿರುವ ಅನುದಾನ ಅದೇ ಉದ್ದೇಶಕ್ಕಾಗಿ ಬಳಸತಕ್ಕದ್ದು, ಬೇರೆ ಉದ್ದೇಶಕ್ಕಾಗಿ ಯಾವುದೇ ಸಂದರ್ಭದಲ್ಲಿ ಬಳಸತಕ್ಕದ್ದಲ್ಲ.
2. ಸಂಬಂಧಪಟ್ಟ ಸಂಸ್ಥೆಗಳು ಈಗಾಗಲೇ ಪಾವತಿಸಿರುವ ಆಯಾ ತ್ರೈಮಾಸಿಕ ಮಜೂರಿ ಮತ್ತು ಅವರಿಂದ ಪಡೆದ ಉತ್ಪನ್ನದ ಲೆಕ್ಕವನ್ನು ಲೆಕ್ಕ ಪರಿಶೋಧಕರಿಂದ ಪರಿಶೀಲಿಸಿ ದೃಢೀಕರಣವನ್ನು ಪಾವತಿಸುವ ಮುನ್ನಾ ಪಡೆಯತಕ್ಕದ್ದು.
3. ತ್ರೈಮಾಸಿಕ ಅವಧಿಗೊಮ್ಮೆ ಅನುರೂಪ ಮಜೂರಿಯ ಪಾವತಿಯಾಗುವುದು ಅಥವಾ ಸಂಸ್ಥೆಗಳು ಅನುರೂಪ ಮಜೂರಿಯನ್ನು ಪಾವತಿಸಿ, ತ್ರೈಮಾಸಿಕ ಅವಧಿಗೊಮ್ಮೆ ಪ್ರಸ್ತಾವನೆ ಸಲ್ಲಿಸಿ, ಅನುದಾನ ಪಡೆಯತಕ್ಕದ್ದು.
4. ಅನುರೂಪ ವೇತನವನ್ನು ಆಯಾ ಕುಶಲಕರ್ಮಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಜಮೆ ಮಾಡತಕ್ಕದ್ದು.
5. ಅನುದಾನದ ಬಳಕೆಯ ಪ್ರಮಾಣ ಪತ್ರವನ್ನು ಕಾಲಕಾಲಕ್ಕೆ ಸಲ್ಲಿಸುವುದು.
6. ಯೋಜನೆಯ ಪ್ರಯೋಜನ ಪಡೆದ ಕುಶಲಕರ್ಮಿಗಳ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸುವುದು.
7. ಈ ಯೋಜನೆಯಿಂದ ಹೆಚ್ಚುವರಿ ಕುಶಲಕರ್ಮಿಗಳಿಗೆ ತಲುಪಿರುವ ಪ್ರಯೋಜನೆಯ ವಿವರವನ್ನು ತ್ರೈಮಾಸಿಕ ಅವಧಿಗೊಮ್ಮೆ ಸರ್ಕಾರಕ್ಕೆ ಮಾಹಿತಿ ಸಲ್ಲಿಸುವುದು.
8. ಇತರೆ ಅಗತ್ಯ ಮಾಹಿತಿಯನ್ನು ಅನುಬಂಧ–2, ಅನುಬಂಧ–3 ಮತ್ತು ಅನುಬಂಧ–4 ರಲ್ಲಿ ಸಲ್ಲಿಸುವುದು.

(ಅನುಬಂಧ–1)

**ಯೋಜನೆಯ ಹೆಸರು : ತೆಂಗಿನನಾರಿನ ವಲಯಕ್ಕೆ ನೆರವು–ತೆಂಗುಭಾಗ್ಯ**

**ಲೆಕ್ಕ ಶೀರ್ಷಿಕೆ : 2851–00–106–0–12 (059)**

| ಕ್ರ ಸಂ. | ಉತ್ಪನ್ನಗಳ ಹೆಸರು | ಪರಿಮಾಣ | ತುಂಡುಭತ್ಯೆ ದರ ರೂ.ಗಳಲ್ಲಿ |
|---|---|---|---|
| 1 | ತೆಂಗಿನ ನಾರು – 1 ಕೆ.ಜಿ.ಗೆ. | ಕೆ.ಜಿ. | 3.25 |
| 2 | ನಾರು ಬಂಡಲ್ ಕೂಲಿ –1000 ಕೆ.ಜಿ. 45 ರಿಂದ 50ಕೆ.ಜಿ. –1ಬೇಲ್‌ಗೆ | ಕೆ.ಜಿ. | 11.00 |
| 3 | ಹುರಿ 80 ರನ್ನೇಜ್ – 1 ಕೆ.ಜಿ. | ಕೆ.ಜಿ. | 7.00 |
| 4 | ಹುರಿ 160–200 ರನ್ನೇಜ್ – 1 ಕೆ.ಜಿ. | ಕೆ.ಜಿ. | 15.00 |
| 5 | 160–200 ರನ್ನೇಜ್ 2ಪ್ಲೆ ಹುರಿ (ಸಿಂಗಲ್ ಹೆಡ್)– 1 ಕೆ.ಜಿ. | ಕೆ.ಜಿ. | 10.00 |
| 6 | 160–200 ರನ್ನೇಜ್ 2ಪ್ಲೆ ಹುರಿ (ಡಬಲ್ ಹೆಡ್) – 1 ಕೆ.ಜಿ. | ಕೆ.ಜಿ. | 9.00 |
| 7 | 200–240 ರನ್ನೇಜ್ 3ಪ್ಲೆ ಹುರಿ (ಡಬಲ್ ಹೆಡ್) – 1 ಕೆ.ಜಿ. | ಕೆ.ಜಿ. | 12.00 |
| 8 | 240–280 ರನ್ನೇಜ್ ಹುರಿ 2ಪ್ಲೈ – 1 ಕೆ.ಜಿ. | ಕೆ.ಜಿ. | 15.00 |
| 9 | ಹುರಿಗೆ ಬಣ್ಣ ಹಾಕುವುದು – 1 ಕೆ.ಜಿ. | ಕೆ.ಜಿ. | 3.00 |
| 10 | ಸುರುಳಿಹಗ್ಗ – 1 ಕೆ.ಜಿ. | ಕೆ.ಜಿ. | 2.25 |
| 11 | 2ಪ್ಲೈ ಸಾರ್ವಹುರಿ –1 ಕೆ.ಜಿ | ಕೆ.ಜಿ. | 12.00 |
| 12 | 3ಪ್ಲೈ ಸಾರ್ವಹುರಿ – 1 ಕೆ.ಜಿ | ಕೆ.ಜಿ. | 10.00 |

| ಕ್ರ ಸಂ. | ಉತ್ಪನ್ನಗಳ ಹೆಸರು | ಪರಿ ಮಾಣ | ತುಂಡುಭತ್ಯೆ ದರ ರೂ.ಗಳಲ್ಲಿ |
|---|---|---|---|
| 14 | ಮ್ಯಾಟಿಂಗ್– 4 ಶ್ಯಾಫ್ಟ್ ಆಟೋಮ್ಯಾಟಿಕ್ ಪವರ್ ಲೂಮ್ – 1 ಚ.ಮೀ. | ಚ.ಮೀ. | 18.00 |
| 15 | ಮ್ಯಾಟಿಂಗ್– 2 ಶ್ಯಾಫ್ಟ್ ಆಟೋಮ್ಯಾಟಿಕ್ ಪವರ್ ಲೂಮ್ – 1 ಚ.ಮೀ. | ಚ.ಮೀ. | 15.00 |
| 16 | ಮ್ಯಾಟಿಂಗ್– 4 ಶ್ಯಾಫ್ಟ್ ಸೆಮಿ–ಆಟೋಮ್ಯಾಟಿಕ್ ಪವರ್ ಲೂಮ್ – 1 ಚ.ಮೀ. | ಚ.ಮೀ. | 28.00 |
| 17 | ಮ್ಯಾಟಿಂಗ್– 2 ಶ್ಯಾಫ್ಟ್ ಸೆಮಿ–ಆಟೋಮ್ಯಾಟಿಕ್ ಪವರ್ ಲೂಮ್ – 1 ಚ.ಮೀ. | ಚ.ಮೀ. | 25.00 |
| 18 | ಮ್ಯಾಟಿಂಗ್ – ಜಿಯೋ ಟೆಕ್ಸ್ಟೈಲ್ಸ್ – 1 ಚ.ಮೀ. (400 ಜಿ.ಎಸ್.ಎಂ) | ಚ.ಮೀ. | 10.00 |
| 19 | ಮ್ಯಾಟಿಂಗ್ – ಜಿಯೋ ಟೆಕ್ಸ್ಟೈಲ್ಸ್ – 1 ಚ.ಮೀ. (700 ಜಿ.ಎಸ್.ಎಂ) | ಚ.ಮೀ. | 12.00 |
| 20 | ಮ್ಯಾಟಿಂಗ್ – ಜಿಯೋ ಟೆಕ್ಸ್ಟೈಲ್ಸ್ – 1 ಚ.ಮೀ. (900 ಜಿ.ಎಸ್.ಎಂ) | ಚ.ಮೀ. | 14.00 |
| 21 | ಮ್ಯಾಟಿಂಗ್ – ಎಸ್‌ಕೆ1 – 1 ಚ.ಮೀ. | ಚ.ಮೀ. | 20.00 |
| 22 | ಮ್ಯಾಟಿಂಗ್ – ಎಸ್‌ಕೆ1 ಸೆಮಿ ಆಟೋಮ್ಯಾಟಿಕ್ –1 ಚ.ಮೀ. | ಚ.ಮೀ. | 32.00 |
| 23 | ಡಚ್ ಮ್ಯಾಟ್ – 1 ಚ.ಅ. | ಚ.ಅ. | 6.00 |
| 24 | ಕಾರಿಡಾರ್ ಮ್ಯಾಟ್ – 1 ಚ.ಅ. | ಚ.ಅ. | 6.00 |
| 25 | ಎಫ್.ಎಫ್. ಮ್ಯಾಟ್ – 1 ಚ.ಅ. | ಚ.ಅ. | 42.00 |
| 26 | ತೆಂಗಿನ ಕಡ್ಡಿ ಪೊರಕೆ (500 ಗ್ರಾಂ ಪೊರಕೆಗೆ) | ಕೆ.ಜಿ. | 6.00 |
| 27 | ತೆಂಗಿನ ಕಡ್ಡಿ ಪೊರಕೆ (1 ಕೆ.ಜಿ ಪೊರಕೆಗೆ) | ಕೆ.ಜಿ. | 12.00 |
| 28 | ಕಾಯರ್ ಪಿತ್ ಗೊಬ್ಬರ – 1 ಕೆ.ಜಿ.ಗೆ | ಕೆ.ಜಿ. | 2.00 |
| 29 | ಹಾಸಿಗೆ ತಯಾರಿಕೆ – ಪ್ರತಿ ಒಂದಕ್ಕೆ | ಸಂ. | 210.00 |
| 30 | ಕಾಯರ್ ವಿನಿಯರ್ ಬೋರ್ಡ್ – 1 ಚ.ಅ.ಗೆ | ಚ.ಅ. | 50.00 |

(ಅನುಬಂಧ–2)

## Details of Production Units ಉತ್ಪಾದನಾ ಕೇಂದ್ರಗಳ ವಿವರಗಳು

| Sl. No. | Location of the unit | Product Produced | Installed Production capacity | Previous 3 months average production | No. of wage workers working | Production status (presently working or not working) | No. of years since the unit commenced production |
|---|---|---|---|---|---|---|---|
| ಸಂ. | ಉತ್ಪಾದನಾ ಕೇಂದ್ರದ ಹೆಸರು ಮತ್ತು ವಿಳಾಸ | ಉತ್ಪಾದನೆ ಮಾಡಲಾದ ಉತ್ಪನ್ನ | ಕೇಂದ್ರದ ಉತ್ಪಾದನಾ ಸಾಮರ್ಥ್ಯ | ಹಿಂದಿನ 3 ತಿಂಗಳ ಸರಾಸರಿ ಉತ್ಪಾದನೆ | ಕಾರ್ಯ ನಿರ್ವಹಿಸುತ್ತಿರುವ ಕಾರ್ಮಿಕರ ಸಂಖ್ಯೆ | ಉತ್ಪಾದನಾ ಸ್ಥಿತಿ (ಕಾರ್ಯ ನಿರ್ವಹಿಸುತ್ತಿದೆ/ ಇಲ್ಲ) | ಎಷ್ಟು ವರ್ಷಗಳಿಂದ ಈ ಉತ್ಪನ್ನದ ಉತ್ಪಾದನೆ ಪ್ರಾರಂಭಿಸಲಾಗಿದೆ. |
| | | | | | | | |
| | | | | | | | |
| | | | | | | | |

(ಅನುಬಂಧ--3)

## Details of Production ಉತ್ಪಾದನೆಯ ವಿವರಗಳು

Month @ Year : ತಿಂಗಳು & ವರ್ಷ:

| Sl. No. | Location of the unit | Product Produced | Quantity produced | Piece rate | Total wages paid |
|---|---|---|---|---|---|
| ಸಂ. | ಉತ್ಪಾದನಾ ಕೇಂದ್ರದ ಹೆಸರು ಮತ್ತು ವಿಳಾಸ | ಉತ್ಪಾದನೆ ಮಾಡಲಾದ ಉತ್ಪನ್ನ | ಉತ್ಪಾದಿತ ಪ್ರಮಾಣ | ತುಂಡುಭತ್ಯೆ ದರ | ಪಾವತಿಸಲಾದ ಒಟ್ಟು ತುಂಡುಭತ್ಯೆ |
| | | | | | |
| | | | | | |

(ಅನುಬಂಧ-4)

## Details of artisan /workers ಕಾರ್ಮಿಕರ/ ಕುಶಲಕರ್ಮಿಗಳ ವಿವರಗಳು

Month @ Year : ತಿಂಗಳು & ವರ್ಷ:

| Sl. No. | Location of the unit | Name of the artisan | Product Produced | Quantity produced | Piece rate | Total wages paid |
|---|---|---|---|---|---|---|
| ಸಂ. | ಉತ್ಪಾದನಾ ಕೇಂದ್ರದ ಹೆಸರು ಮತ್ತು ವಿಳಾಸ | ಕುಶಲಕರ್ಮಿಯ ಹೆಸರು | ಉತ್ಪಾದನೆ ಮಾಡಲಾದ ಉತ್ಪನ್ನ | ಉತ್ಪಾದಿತ ಪ್ರಮಾಣ | ತುಂಡುಭತ್ಯೆ | ಪಾವತಿಸಲಾದ ಒಟ್ಟು ತುಂಡುಭತ್ಯೆ |
| | | | | | | |
| | | | | | | |
| | | | | | | |

Sumathi 1.1.18
[ಸುಮತಿ ಎಸ್.]

ಸರ್ಕಾರದ ಅಧೀನ ಕಾರ್ಯದರ್ಶಿ [ಸಪ್ರಕೈ],
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.